

# ಆಮೆಯ ಮಾತು

ಆಮೆ ಮೊಲದ ಹಳೆಯ ಕತೆಯು ನಿಮಗೆ ಗೊತ್ತು
ಆಲಸ್ಯ ಮತ್ತು ಉಡಾಫೆಯಿಂದ ಮೊಲ ಸೋತಿತ್ತು
ಕೆಟ್ಟ ಮೇಲೆ ಬುದ್ಧಿ ಬಂತು ಅನ್ನುವ ಗಾದೆಯ ಹಾಗೆ
ಗೊತ್ತಾಯಿತು ಮೊಲಕ್ಕೆ ತಾನು ಸೋತದ್ದೇಕೆ? ಹೇಗೆ?

‘‘ಈ ಬಾರಿ ಖಂಡಿತ ಮಾಡುವುದಿಲ್ಲ ಆ ಹಳೆಯ ತಪ್ಪು
ಗೆದ್ದೇ ಗೆಲ್ಲುವೆ ಓಟದಲ್ಲಿ, ತಂದೇ ತರುತ್ತೇನೆ ಕಪ್ಪು’’
ಪ್ರತಿಜ್ಞೆ ಮಾಡಿತು ಮೊಲ ತಂದೆ ತಾಯಿಯ ಮುಂದೆ
ಆಮೆಯ ಹತ್ತಿರ ಹೇಳಿತು: ‘‘ಸ್ಪರ್ಧೆ ನಡೆಯಲಿ ಇಂದೇ’’

ಆಮೆ ನಕ್ಕಿತು: ‘‘ನನಗೇನಂತೆ ಆಗಲಿ ಇನ್ನೊಂದು ಪಂದ್ಯ
ಒಮ್ಮೆ ಸೋತದ್ದು ಸಾಲದೆ? ಪುನಃ ಸೋಲಲು ಬಂದ್ಯಾ?’’
ಕಾಡಿನ ಮರಗಳೆ ಪ್ರೇಕ್ಷಕರು ಜಿಂಕೆ ಮರಿಯೆ ಅಂಪೈರು
ರೆಡಿ ಒನ್ ಟೂ ತ್ರೀ ಬಕಪ್‌ಬಕಪ್ ಓಟದ ಸ್ಪರ್ಧೆ ಶುರು

ಶರವೇಗದಿಂದ ಓಡಿತು ಮೊಲ ಎಲ್ಲೂ ಕೂಡಾ ನಿಲ್ಲದೆ
ಗುರಿ ಮುಟ್ಟಿ ಮರಳಿ ಬಂತು. ಆಮೆ ಹೊರಟಲ್ಲೆ ಇದೆ!
ಗೆದ್ದ ಖುಷಿಯಲ್ಲಿ ನಗುತ್ತಾ ಮೊಲ ಹೇಳಿತು ‘‘ಓ ಆಮೆ
ನೀನು ಗುರಿ ತಲಪುವಾಗ ಬರುತ್ತೆ ಎಪ್ರಿಲ್ ಕಳೆದು ಮೇ’’



ಆಮೆ ಅಂದಿತು ‘‘ನೀನೇ ಗೆದ್ದೆ. ನಿನಗೇ ಇರಲಿ ಕಪ್ಪು
ನನಗೆ ಸಾಕು ಬೆನ್ನಿನ ಮೇಲೆ ದೇವರು ಕೊಟ್ಟ ಚಿಪ್ಪು!
ಅಂದಹಾಗೆ ಮಿತ್ರಾ ತಿಳಿದಿರಲಿ ಒಂದು ಮುಖ್ಯ ವಿಷಯ
ನನಗೆ ನಿನ್ನಷ್ಟು ಅವಸರವಿಲ್ಲ, ಉಂಟು ದೀರ್ಘಾಯುಷ್ಯ!’’